***ದೊಡ್ಡಬಳ್ಳಾಪುರ ನಗರವ್ಯಾಪ್ತಿಯಲ್ಲಿ ಚಿಕುನ್‌ಗುನ್ಯ / ಡೆಂಗ್ಯೂಜ್ವರ / ಹಂದಿಜ್ವರವು ಹರಡದಂತೆ ನಗರಸಭೆ ವತಿಯಿಂದ ಈ ಕೆಳಕಂಡ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿರುತ್ತೆ.***

1) ದೊಡ್ಡಬಳ್ಳಾಪುರ ನಗರದ ಸಾರ್ವಜನಿಕರಿಗೆ ಚಿಕುನ್ ಗುನ್ಯ / ಡೆಂಗ್ಯು ಜ್ವರ ನಿಯಂತ್ರಣದ ಬಗ್ಗೆ ಮುನ್ನೆಚ್ಚರಿಕೆ ಕ್ರಮವಾಗಿ ಕರಪತ್ರಗಳನ್ನು ಮುದ್ರಿಸಿ ಮನೆಮನೆಗೂ ಸಹ ಹಂಚಿರುತ್ತೆ. ಆಟೋ ಮುಖೇನ ಪ್ರಚಾರ ಸಹ ಮಾಡಿಸಿರುತ್ತೆ.
2) ನಗರದ ಎಲ್ಲಾ ವಾರ್ಡ್‌ಗಳಲ್ಲಿ ಪ್ರತಿದಿನ ಬೆಳಿಗ್ಗೆ ಬೈಟೆಕ್ಸ್ 1000 ಕ್ರಿಮಿನಾಶಕವನ್ನು ಸಿಂಪಡಿಸಿರುತ್ತೆ.
3) ಸಾಯಂಕಾಲ ಫಾಗಿಂಗ್ ಯಂತ್ರಗಳಿಂದ ಸೊಳ್ಳೆಗಳ ನಿಯಂತ್ರಣಕ್ಕಾಗಿ ಹೊಗೆ ಸಿಂಪಡಣೆ ಮಾಡುತ್ತಿರುತ್ತೇವೆ.
4) ಬಸ್ ನಿಲ್ದಾಣ ಮತ್ತು ಇತರೆ ಸ್ಥಳಗಳಲ್ಲಿ ಇರುವ ಶೌಚಾಲಯ ಮತ್ತು ಇತರೆ ಮೂತ್ರ ಮಾಡುವ ಸ್ಥಳಗಳನ್ನು ಗುರ್ತಿಸಿ ಪ್ರತಿದಿನ ಕ್ರಿಮಿನಾಶಕವಾದ ಮೆಲಾಥಿನ್‌ಡಸ್ಟ್ ಮತ್ತು ಬ್ಲೀಚಿಂಗ್ ಪೌಡರ್ ಸಿಂಪಡಿಸಿರುತ್ತೇವೆ.
5) ಈ ಬಗ್ಗೆ ನಮ್ಮ ಪೌರಕಾರ್ಮಿಕರಿಗೆ ಸೂಚನೆ ನೀಡಿ, ರಸ್ತೆ ಬದಿಗಳಲ್ಲಿ ತೆಂಗಿನ ಚಿಪ್ಪುಗಳಲ್ಲಿ, ಪ್ಲಾಸ್ಟಿಕ್ ಬಾಟಲ್‌ಗಳಲ್ಲಿ / ಹಳೇ ಟೈರ್‌ಗಳಲ್ಲಿ ನೀರು ನಿಂತಿದ್ದರೆ, ಅವುಗಳನ್ನು ತಕ್ಷಣ ತೆಗೆಯುವಂತೆ ಸೂಚನೆ ನೀಡಿರುತ್ತೆ.
6) ನಮ್ಮ ಮಲೇರಿಯಾ ಗ್ಯಾಂಗ್‌ಮನ್‌ರವರಿಂದ ರಸ್ತೆ ಬದಿಯಲ್ಲಿರುವ ಪಾರ್ಥೇನಿಯಂ ಗಿಡಗಳನ್ನು ಕತ್ತರಿಸಿ ಒಂದು ಕಡೆ ಹಾಕಿಸಿರುತ್ತೇವೆ.
7) ಪ್ರತಿ ದಿನ ನಮ್ಮ ಆರೋಗ್ಯ ಸಿಬ್ಬಂದಿಯವರು ಆಸ್ಪತ್ರೆ ಸಿಬ್ಬಂದಿಯವರೊಂದಿಗೆ ಜೊತೆಗೂಡಿ ನಗರದಲ್ಲಿ ಎಲ್ಲಾ ವಾರ್ಡ್‌ಗಳಿಗೆ ಹೋಗಿ, ಈ ಬಗ್ಗೆ ಮುನ್ನೆಚ್ಚರಿಕೆ ಸೂಚನಾ ಕ್ರಮಗಳನ್ನು ನೀಡುತ್ತಾ ಮತ್ತು ಕರಪತ್ರಗಳನ್ನು ಸಹ ಹಂಚಿಸಿರುತ್ತೆ.
8) ನಗರದಲ್ಲಿ ಬಿಡಾಡಿ ಹಂದಿಗಳನ್ನು ಈಗಾಗಲೇ ಬಲೆಗಳಿಂದ ಹಿಡಿದು ಹರಾಜು ಹಾಕಲು ಕ್ರಮ ಕೈಗೊಂಡಿರುತ್ತೆ.
9) **ದಿನಾಂಕ:29-06-2009 ರಂದು** ನಗರಸಭೆ ಮತ್ತು ಆರೋಗ್ಯ ಇಲಾಖೆಯ ಸಿಬ್ಬಂದಿ ಜೊತೆಗೆ, ಚಿಕುನ್ ಗುನ್ಯ/ಡೆಂಗ್ಯುಜ್ವರ/ಮಲೇರಿಯಾದಂತಹ ಸಾಂಕ್ರಾಮಿಕ ರೋಗಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು **"ಮಲೇರಿಯಾ ಮಾಸಾಚರಣೆ ಜೂನ್-2009"** ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.
10) ಮಲೇರಿಯಾ ಮಾಸಾಚರಣೆ ಕಾರ್ಯಕ್ರಮವನ್ನು ನಗರಸಭೆ ಮತ್ತು ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದೆ.
11) **ದಿನಾಂಕ:03-07-2009ರಂದು** ನಗರಸಭೆ ಮತ್ತು ಆರೋಗ್ಯ ಇಲಾಖೆಯ ಸಿಬ್ಬಂದಿ ಜೊತೆಗೆ, ಚಿಕುನ್ ಗುನ್ಯ/ಡೆಂಗ್ಯುಜ್ವರ/ಮಲೇರಿಯಾದಂತಹ ಸಾಂಕ್ರಾಮಿಕ ರೋಗಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು **ಜಾತಾ ಕಾರ್ಯಕ್ರಮವನ್ನು** ಹಮ್ಮಿಕೊಳ್ಳಲಾಗಿದೆ.

**ಸಹಿ/-**
**ಪೌರಾಯುಕ್ತರು,**
**ನಗರಸಭೆ, ದೊಡ್ಡಬಳ್ಳಾಪುರ.**